ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ



ಹೆಸರು	:	ಶ್ರೀ. ಸುರೇಶ ಗೌಡ
ವಿಳಾಸ	:	ಹೆಚ್. ತಿಮ್ಮಾಪುರ, ರಾಯಚೂರು (ತಾ) & (ಜಿ)
ವಯಸ್ಸು	:	44 ವರ್ಷ
ಶೈಕ್ಷಣಿಕ ವಿದ್ಯಾರ್ಹತೆ	:	10 ನೇ ತರಗತಿ
ಕುಟುಂಬ ಸದಸ್ಯರ ಸಂಖ್ಯೆ	:	05
ಒಟ್ಟು ಉಳುಮೆ ಭೂಮಿ	:	40 ಎಕರೆ
ಬೆಳೆಗಳು	:	10 ಎಕರೆ ಪೇರಲ, ನೇರಳೆ, 5 ಎಕರೆ ಬ್ಯಾಡಗಿ ಮೆಣಸಿನಕಾಯಿ, 4 ಎಕರೆ ತೊಗರಿ ಬೀಜೋತ್ಪಾದನೆ, 4 ಎಕರೆ ಜೋಳ, 6 ಎಕರೆ ಹತ್ತಿ, 5 ಎಕರೆ ಮೇವಿನ ಬೆಳೆ ಹಾಗೂ ಕೃಷಿ ಹೊಂಡ
ದನಕರು/ಮೀನು	:	13 ಆಕಳು, 200 ಆಡು, 100 ಕೋಳಿ
ಉದ್ಯಮಗಳು	:	ಕೃಷಿ
ಪ್ರಶಸ್ತಿ/ಗೌರವಗಳು	:	1. ಶ್ರೇಷ್ಠ ಕೃಷಿಕ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು 2. ಕುರಿ ಮತ್ತು ಆಡುಗಳ ಪ್ರದರ್ಶನದಲ್ಲಿ ಪ್ರಥಮ ಬಹುಮಾನ 3. ಕೃಷಿ ಸಂಪನ್ಮೂಲ ವ್ಯಕ್ತಿ, ಕೃಷಿ ಮೇಳ, ಕೃವಿವಿ, ರಾಯಚೂರು 4. ಸೂಪರ್ ಸ್ಟಾರ್ ವಿಜಯವಾಣಿ 5. ಡಿಸ್ಟ್ರಿಕ್ಟ್ ಮಿಲಿಯನೇರ್ ಫಾರ್ಮರ್ ಆಫ್ ಇಂಡಿಯಾ ಅವಾರ್ಡ್–2023 ಐಎಆರ್ಐ–ಪುಸ, ನವದೆಹಲಿ
ವಾರ್ಷಿಕ ಒಟ್ಟು ಆದಾಯ	:	ಒಂದು ಕೋಟಿ ಒಂಬತ್ತು ಲಕ್ಷ ರೂ.





ವಿಶೇಷತೆಗಳು:











- ಪ್ರತಿ ವರ್ಷ ಟಿ.ಎಸ್.–3ಆರ್. ತೊಗರಿಯಲ್ಲಿ ಬೀಜೋತ್ಪಾದನೆ ಮಾಡುತ್ತಿದ್ದಾರೆ.
- ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನಲ್ಲಿ ಸತತ ಮಾರ್ಗದರ್ಶನದಲ್ಲಿ ಆಡು ಮತ್ತು ಆಕಳುಗಳಿಗೆ ಹಲವಾರು ಮೇವಿನ ಬೆಳೆಗಳು ಬೆಳೆಯುತ್ತಾರೆ. ಸಿ.ಜ.ಎಫ್.ಎಸ್–31 ಹೆಡ್ಸ್ ಲುಸರ್ನ್, ಮೇವಿನ ಮರಗಳು, ನುಗ್ಗೆ ಹಲಸಂದಿ ಬೆಳೆಯುತ್ತಾರೆ
- ಇವರು ಸುಮಾರು 6 ಕಿ.ಮೀ. ದೂರದ ನದಿಯಿಂದ ಪೈಪಲೈನ್ ಮುಖಾಂತರ ಕೃಷಿ ಹೊಂಡ ಮಾಡಿ ನೀರಿನ ಸೌಲಭ್ಯ ಮಾಡಿಕೊಂಡಿರುತ್ತಾರೆ.
- ಇವರು ಹೆಚ್ಚು ಸಾವಯವ ಕೃಷಿಗೆ ಗಮನ ಕೊಟ್ಟು ಜೀವಾಮೃತ, ಜೈವಿಕ ಗೊಬ್ಬರ ಹಾಗೂ ಎರೆಹುಳು ಗೊಬ್ಬರದ ಬಳಕೆ ಮಾಡಿ ಕೃಷಿಯಲ್ಲಿ ಸಾವಯವ ಕೃಷಿಯನ್ನು ಮಾಡುತ್ತಾರೆ.
- 3 ವರ್ಷಗಳಿಂದ ಜೇನು ಸಾಕಾಣಿಕೆ ಮಾಡಿ, ವಾರ್ಷಿಕವಾಗಿ 8 ಕೆ.ಜಿ. ಜೇನುತುಪ್ಪ ಪಡೆಯುತ್ತಿದ್ದಾರೆ.
- ಪೇರಲ ಹಣ್ಣಿನ ಗಿಡಗಳಲ್ಲಿ ಪ್ರೋನಿಂಗ್ ಮತ್ತು ಚಿಗುರು ಚಿವುಟುವುವ ತಂತ್ರಜ್ಞಾನವನ್ನು ಕೈಗೊಂಡಿರುತ್ತಾರೆ.
- ಪೇರಲ ಬೆಳೆಯಲ್ಲಿ ಅಧಿಕ ಸಾಂದ್ರತೆಯ ಬೆಳೆಯನ್ನು ಬೆಳೆದಿರುತ್ತಾರೆ (ಉದಾ: ಸಾಲಿನಿಂದ ಸಾಲಿಗೆ 12 ಅಡಿ ಗಿಡದಿಂದ ಗಿಡಕ್ಕೆ 8 ಅಡಿ ಅಂತರ)
- ಹೈನುಗಾರಿಕೆಯಲ್ಲಿ 3 ಗಿರ್ ಆಕಳುಗಳ ಸಾಕಾಣಿಕೆ ಮಾಡುತ್ತಿದ್ದಾರೆ.
- ಇವರು ತಮ್ಮ ಕೃಷಿ ಭೂಮಿಯ ಸುತ್ತಲೂ ಸೋಲಾರ್ ಬೇಲಿಯನ್ನು ಹಾಕಿಸಿರುತ್ತಾರೆ.
- ಒಟ್ಟಾರೆಯಾಗಿ ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ, ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.